**ಓ ಎಸ್ ನಂಃ 558/2014**
**ಪಿ ಡಬ್ಲ್ಯೂ ಃ 1**

**ದಿಃ 10.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 5 ಪರ ಶ್ರೀ ಬಿ ವಿ ಕೆ ವಕೀಲರಿಂದಃ-**

ನಿಪಿ 16 ರ ಪ್ರಕಾರ ನಂಜುಂಡಯ್ಯನವರ ಹೆಸರಿಗೆ ದಾವಾ ಸ್ವತ್ತುಗಳ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿ. ನಂಜುಂಡಯ್ಯನವರ ಮರಣದ ನಂತರ ದಾವಾ ಸ್ವತ್ತುಗಳ ಖಾತೆಯು ಆತನ ಹೆಂಡತಿ ನಾಗಮ್ಮರವರ ಹೆಸರಿಗೆ ನಿಪಿ 17 ರ ಪ್ರಕಾರ ಪೌತಿ ಸಬೂಬು ಖಾತೆ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಸಿಕೊಂಡಿದ್ದಾರೆ. ನಾಗಮ್ಮನವರ ಹೆಸರಿಗೆ ದಾವಾ ಸ್ವತ್ತುಗಳು ಖಾತೆ ವರ್ಗಾವಣೆ ಬಗ್ಗೆ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿಯು ಇತ್ಯರ್ಥಕ್ಕೆ ಬಾಕಿ ಇದೆ. ಮೇಲ್ಮನವಿಯ ಮೆಮೊ ವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ. ತಾವು ಯಾವುದೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಆದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1993 ನೇ ಸಾಲಿನಲ್ಲಿ ನಂಜುಂಡಯ್ಯನವರನ್ನು ನಾಗಮ್ಮರವರವನ್ನು ಮದುವೆ ಆಗಿರುತ್ತಾರೆ. ಆದರೆ ನಂಜುಂಡಯ್ಯನವರು ತಮ್ಮನ್ನು ಯಾವತ್ತೂ ಮದುವೆ ಆಗದಿದ್ದರು ಸಹ ನಿಪಿ 6 ಲಗ್ನ ಪತ್ರಿಕೆಯನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಂಜುಂಡಯ್ಯನವರ ಜೀವಿತಾವಧಿಯಲ್ಲಿ ಅವರ ವಿರುದ್ಧ ಜೀವನಾಂಶಕ್ಕಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ನಾವಿಬ್ಬರೂ ಅನ್ಯೋನ್ಯವಾಗಿದ್ದೆವು. ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲರುವುದಿಲ್ಲ. ತಾವು ನಂಜುಂಡಯ್ಯನವರ ಜೊತೆ ದಾಂಪತ್ಯ ಜೀವನವನ್ನು ಮಾಯಸಂದ್ರ ಗ್ರಾಮದಲ್ಲಿ ನಡೆಸಿದ್ದೀರಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ. ತಾವು ನಂಜುಂಡಯ್ಯನವರನ್ನು ಮದುವೆ ಆಗಿರುವುದಿಲ್ಲ ಮತ್ತು ಆತನ ಜೊತೆ ಮಾಯಸಂದ್ರ ಗಾಮದಲ್ಲಿ ದಾಂಪತ್ಯ ಜೀವನ ನಡೆಸಿರುವುದಿಲ್ಲ. ಆ ಕಾರಣ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮನವರು ತಮ್ಮ ಕಷ್ಟವನ್ನು

ಓ ಎಸ್ ನಂಃ 558/2014

ಪಿ ಡಬ್ಲ್ಯೂ ಃ 1

ತೀರಿಸಿಕೊಳ್ಳುವ ಉದ್ದೇಶದಿಂದ ದಾವಾ ಸ್ವತ್ತುಗಳಲ್ಲಿ ಒಂದು ಸ್ವತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ತಾವು ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಾನು ನಂಜುಂಡಯ್ಯನವರ ಹೆಂಡತಿ ಆಗಿದ್ದು ಅದನ್ನು ಮಾರಾಟ ಮಾಡಲು ಅವರು ಯಾರು ಎಂದು ಸಾಕ್ಷ್ಯ ನುಡಿಯುತ್ತಾರೆ. ನಂಜುಂಡಯ್ಯನವರ ಮರಣ ದಿನಾಂಕದಿಂದ ಈ ದಾವೆಯನ್ನು ಸಲ್ಲಿಸುವ ತನಕ ತಾವು ಏನಾದರೂ ಕಾನೂನಿನ ಕ್ರಮವನ್ನು ನಡೆಸಿದ್ದೀರ ಎಂದರೆ ಸಾಕ್ಷಿ ನಡೆಸಿದ್ದೇವೆ. ಕಾನೂನಿನ ಕ್ರಮ ಜರುಗಿಸಿದ್ದೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಎಲ್ಲಾ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ಈ ದಾವೆಯನ್ನು ಸಲ್ಲಿಸಿದ ನಂತರ ಪೋಲಿಸ್ ಠಾಣೆಯಲ್ಲಿ ಒಂದು ದೂರನ್ನು ದಾಖಲಿಸಿದ್ದೀರಿ ಎಂದರೆ ಸರಿ. ಸದರಿ ದೂರನ್ನು ರೇವಣ್ಣ ಸಿದ್ದಯ್ಯನವರು ನಮ್ಮ ಮನೆಯ ಬಳಿ ರಸ್ತೆ ಮಾಡಲು ಪ್ರಯತ್ನ ಪಟ್ಟಾಗ ನಾನು ಆತನ ವಿರುದ್ಧ ದೂರನ್ನು ದಾಖಲು ಮಾಡಿರುತ್ತೇನೆ. ರಸ್ತೆ ಇದೆ ಎಂದು ತೋರಿಸಲು ತಾವೇನಾದರೂ ಛಾಯಾಚಿತ್ರವನ್ನು ಕೊಟ್ಟಿದ್ದೀರ ಎಂದರೆ ಸಾಕ್ಷಿ ನನಗೆ ಅಷ್ಟು ಬುದ್ಧಿ ನನಗೆ ಇಲ್ಲ ಆದುದರಿಂದ ಸಲ್ಲಿಸಿಲ್ಲ. ಅದು ಯಾವ ಮನೆ ಅಂದರೆ ಸಾಕ್ಷಿ ಅದು ನನ್ನ ಗಂಡನ ಮನೆ. ಆ ಮನೆ ತಾವು ವಾಸವಾಗಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ಹಾಜರು ಪಡಿಸಿದ್ದೇನೆ. ತಾವು ನಂಜುಂಡಯ್ಯನವರನ್ನು ಮದುವೆ ಆಗಿರದ ಕಾರಣ ಆತನ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**